


# ಎವರೆಸ್ಟ್‌ಗೆ ಎಪ್ಪತ್ತು!

**ಮೌಂಟ್ ಎವರೆಸ್ಟ್ ನೆತ್ತಿ ಮೇಲೆ ಮನುಷ್ಯ ಪಾದವೂರಿ ಇದೇ ಮೇ ತಿಂಗಳಿಗೆ 70 ವರ್ಷಗಳು ತುಂಬಿದವು. ಏಳು ದಶಕಗಳು ಕಳೆದರೂ ಶಿಖರ ಏರುವ ಗೀಳು ಕಡಿಮೆ ಆಗುತ್ತಿಲ್ಲ, ಎವರೆಸ್ಟ್‌ಗೆ ವಿರಾಮವೂ ಸಿಗುತ್ತಿಲ್ಲ.**

■ ಶ್ರೀನಿವಾಸ ಜೋಕಟ್ಟೆ

ವಿಶ್ವದ ಅತಿ ಎತ್ತರದ ಪರ್ವತ ಎವರೆಸ್ಟ್ ಶಿಖರ ಏರಿದ ಘಟನೆಗೆ 2023ರ ಮೇ ತಿಂಗಳ ಕೊನೆಯ ವಾರಕ್ಕೆ 70 ವರ್ಷ ಪೂರ್ಣವಾಗಿದೆ. 'ಎವರೆಸ್ಟ್‌ಗೆ ಒಂದಿಷ್ಟು ರೆಸ್ಟ್ ನೀಡಿ' ಎಂದರೂ ನೇಪಾಳ ಸರ್ಕಾರ ಅದನ್ನು ಕಿವಿಗೆ ಹಾಕಿಕೊಳ್ಳದೆ ಪರ್ವತಾರೋಹಿಗಳಿಗೆ ನಿರಂತರ ಅನುಮತಿ ನೀಡುತ್ತಲೇ ಇದೆ.

ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಅನ್ನು ಒಮ್ಮೆ ಏರಬೇಕೆಂಬುದು ಪ್ರತಿಯೊಬ್ಬ ಪರ್ವತಾರೋಹಿಯ ಕನಸು. ನೇಪಾಳ, ನೇಪಾಳ ಹಾಗೂ ಟಿಬೆಟ್ ಗಡಿಯಲ್ಲಿ ಗುರುತಿಸಿಕೊಂಡಿರುವ ಈ ಶಿಖರ ಏರಲು ಪ್ರತಿವರ್ಷ ನೂರಾರು ಸಾಹಸಿಗರು ಪ್ರಯತ್ನಿಸುತ್ತಾರೆ, ಅವರಲ್ಲಿ ಕೆಲವರು ಮಾತ್ರ ಯಶಸ್ಸು ಕಾಣುತ್ತಾರೆ.

ನ್ಯೂಜಿಲೆಂಡ್‌ನ ಎಡ್ಮಂಡ್ ಹಿಲರಿ ಮತ್ತು ಶೆರ್ಪಾ ತೇನ್‌ಸಿಂಗ್ ನೋರ್ಗೆ ಅವರು ಮೇ 29, 1953ರಂದು ಎವರೆಸ್ಟ್‌ನ 29,035 ಅಡಿ (8849 ಮೀಟರ್) ಶಿಖರದ ಮೇಲೆ ಪ್ರಥಮ ಬಾರಿಗೆ ಹೆಜ್ಜೆ ಇರಿಸಿದ್ದರು. (ಆಗ ಶಿಖರದ ಎತ್ತರ 8848 ಮೀಟರ್ ಎಂದಿದ್ದರು). ವಿಶ್ವದ ಅತಿ ಎತ್ತರದ ಪರ್ವತ ಶಿಖರದ ಮೇಲೆ ನಿಂತ ಮೊದಲ ಪರ್ವತಾರೋಹಿಗಳೆಂದು ಅವರು ಇತಿಹಾಸ ಸೃಷ್ಟಿಸಿದ್ದರು. ಇದೀಗ 2023ರ ಮೇ ತಿಂಗಳಿಗೆ ಈ ಘಟನೆಗೆ ಎಪ್ಪತ್ತು ವರ್ಷಗಳು ತುಂಬಿವೆ.

ನೇಪಾಳದ ಪಾಸಂಗ್ ದಾವಾ ಶೆರ್ಪಾ ಇದೇ 2023ರ ಮೇ 14ರಂದು 26ನೇ ಬಾರಿ ಮೌಂಟ್ ಎವರೆಸ್ಟ್ ಶಿಖರ ಏರಿ ದಾಖಲೆ ಮಾಡಿದರು. ಪಾಸಂಗ್ ಶೆರ್ಪಾ 1998ರಲ್ಲಿ 8849 ಮೀಟರ್ ಎತ್ತರದ ಮೌಂಟ್ ಎವರೆಸ್ಟ್ ಅನ್ನು ಮೊದಲ ಬಾರಿ ಏರಿದ್ದರು. ಅಂದಿನಿಂದ, ಅವರು ಪ್ರತಿ ವರ್ಷವೂ ಈ ಎತ್ತರದ ಶಿಖರ ಏರುತ್ತಾ ಬಂದಿದ್ದಾರೆ. ಇದಕ್ಕೂ ಮೊದಲು ನೇಪಾಳದವರೇ ಆದ ಇನ್ನೊಬ್ಬ ಶೆರ್ಪಾ ಕೀಮಾ ರಾತಿ ಅವರ ದಾಖಲೆ ಸರಿಗಟ್ಟಿದ್ದಾರೆ. ಕೀಮಾ ರಾತಿ ಕಳೆದ ವರ್ಷವೇ 26ನೇ ಬಾರಿ ಎವರೆಸ್ಟ್ ಶಿಖರ ಏರಿದ್ದರು. ಈ ವರ್ಷವೂ ಎವರೆಸ್ಟ್ ಏರಲು ಪ್ರಯತ್ನಿಸಲಿದ್ದಾರೆ. ಯಶಸ್ವಿಯಾದರೆ ಅವರ ಹೆಸರಿನಲ್ಲಿ ಹೊಸ ದಾಖಲೆ ರೂಪುಗೊಳ್ಳುತ್ತದೆ. ವಿದೇಶಿ ಪರ್ವತಾರೋಹಿಗಳ ಜೊತೆ ನೇಪಾಳದ ಶೆರ್ಪಾಗಳು ಕೂಡ ಸಹಾಯಕರಾಗಿ, ಜೊತೆಯಲ್ಲಿ ಅವರೂ ದಾಖಲೆ ಮಾಡುತ್ತಿದ್ದಾರೆ!

ಈ ಏಳು ದಶಕಗಳಲ್ಲಿ ಸಾವಿರಾರು ಪರ್ವತಾರೋಹಿಗಳು ಎವರೆಸ್ಟ್ ಶಿಖರ ಏರಿದ್ದಾರೆ. ನೂರಾರು ಜನ ನಡುದಾರಿಯಲ್ಲಿ ಸಾವನ್ನಪ್ಪಿದ್ದಾರೆ. ಆದರೂ ಶಿಖರ ಏರುವ ಗೀಳು ಮಾತ್ರ ಕಡಿಮೆ ಆಗುತ್ತಿಲ್ಲ. 2019ರಲ್ಲಿ ಎವರೆಸ್ಟ್ ಹತ್ತುವವರ ಕ್ಯೂ ಹೆಚ್ಚಾಗಿ ಟ್ರಾಫಿಕ್ ಜಾಮ್ ಕೂಡ ಸೃಷ್ಟಿಯಾದದ್ದಿದೆ. ಈ ಟ್ರಾಫಿಕ್ ಜಾಮ್‌ನಲ್ಲಿ ಅನೇಕರು ಸತ್ತಿರುವುದೂ ಇದೆ.

ಎವರೆಸ್ಟ್ ಏರುವುದು ಈ ದಿನಗಳಲ್ಲಿ ಮಾನವೀಯ ಗೆಲುವಿನ ಪ್ರತೀಕ ಆಗಿ ಉಳಿದಿಲ್ಲ. 1953ರಲ್ಲಿ ಇದು ಸಾಹಸದ ಸಂಗತಿ ಆಗಿತ್ತು. ಆದರೆ ಇಂದು ಸಾಮಾನ್ಯ ಪರ್ವತಾರೋಹಿಯೊಬ್ಬ ಮನಸ್ಸು ಮಾಡಿದರೆ ಎವರೆಸ್ಟ್ ಶಿಖರ ಏರಬಹುದು. ಆದರೆ, ಆರ್ಥಿಕ ಅಡಚಣೆ ಇರಬಾರದು. ಈಗ ಎವರೆಸ್ಟ್ ಏರಿ ಬರಬೇಕಾದರೆ ನಿಮ್ಮ ಬ್ಯಾಂಕ್‌ನಲ್ಲಿ ಲಕ್ಷಗಟ್ಟಲೆ ರೂಪಾಯಿ ಇರಬೇಕು. ಇಲ್ಲಿ ಹತ್ತುವ ಒಟ್ಟು ವೆಚ್ಚ ಕಳೆದ ವರ್ಷದ ತನಕವೂ ಸುಮಾರು 80 ಲಕ್ಷ ರೂಪಾಯಿಗಳಷ್ಟಿತ್ತು.

ಎಡ್ಮಂಡ್ ಹಿಲರಿ ಎರಡು ದಶಕಗಳ ಹಿಂದೆಯೇ ನೇಪಾಳ ಸರ್ಕಾರದ ಬಳಿ ಎವರೆಸ್ಟ್ ಆರೋಹಣಕ್ಕೆ ಕೆಲವು ಕಾಲ ನಿಷೇಧ ಹೇರಲು ಸಲಹೆ ಇತ್ತಿದ್ದರು. ಆದರೆ ನೇಪಾಳ ಸರ್ಕಾರ ತನಗೆ ಸಿಗುವ ಆದಾಯ ಕಳೆದುಕೊಳ್ಳಲು ಬಯಸಿಲ್ಲ. ಎವರೆಸ್ಟ್ ಏರಲು ನೇಪಾಳ ಮತ್ತು ಟಿಬೆಟ್ ಎರಡು ದಾರಿಗಳಿದ್ದರೂ ಟಿಬೆಟ್‌ನ (ಚೀನಾ) ನಿಯಮಗಳು ಕಠಿಣ. ಆದರೆ ಅಲ್ಲಿನ ದಾರಿ ನೇಪಾಳದಷ್ಟು ಕಷ್ಟವಿಲ್ಲ. ಉತ್ಸಾಹಿ ಪರ್ವತಾರೋಹಿಗಳು ನೇಪಾಳ ಮೂಲಕವೇ ಏರುತ್ತಾರೆ. ಇವರೆಲ್ಲ ಮೇಲಕ್ಕೇರುತ್ತಿದ್ದಂತೆ ಸಹಜವಾಗಿಯೇ ದಾರಿಯುದ್ದಕ್ಕೂ ತ್ಯಾಜ್ಯ ವಸ್ತುಗಳ ರಾಶಿಯೂ ಕಂಡುಬರುತ್ತಿದೆ, ಪ್ರಾಕೃತಿಕ ಸಮತೋಲನವೂ ತಪ್ಪುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in